Justice (Department of Legel Affairs) and has decided to drop the proposed amendment ot section 19 of the Karnataka Stamp Act 1957.' Points raised ಏನು? ಏನೂ ಬರೆದಿಲ್ಲ. ಮತ್ತು ಯಾವ ಸೆಕ್ಷನ್ ಎಂದು ಇಲ್ಲಿ ಹಾಕಿಲ್ಲ. ಇದು ಎಲ್ಲವನ್ನು ಇಲ್ಲಿ place ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :– ನೀವು ಹೇಳಿದ್ದೀರಿ difference collect ಮಾಡಿ ಎಂದು. You are proposing to drop. ಸಮಯ ಹಾಳು ಮಾಡುವುದು ಬೇಡ. President of India ಅವರ observation ತರಿಸಿ ಬಿಡಿ. We will go through it.

ಶ್ರೀ ಜಗದೀಶ್ ಶೆಟ್ಟರ್ :– 2003 ಯಲ್ಲಿ ಏನಿತ್ತು ಅದರ ಕಾಪಿ ಕೊಟ್ಟರೆ ನಿಮಗೆ clear ಆಗುತ್ತದೆ. ಅದು ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– Hon'ble President observation ತರಿಸಿ,

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ರಾಷ್ಟ್ರಪತಿಯವರು ಏನು objection ಮಾಡಿದರು ಎನ್ನುವುದು ಬೇಕು.

ಉಪಾಧ್ಯಕ್ಷರು :– ಮಾನ್ಯ ಜಗದೀಶ್ ಶೆಟ್ಟರ್‌ರವರೇ ಬೇರೆ ಬಿಲ್ ತೆಗೆದುಕೊಳ್ಳೋಣ.

ಆ) ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2007

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :– ಮಾನ್ಯ ಅಧ್ಯಕ್ಷರೆ, 2007 ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :– ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸ್ಟಾಂಪು ಅಮೆಂಡ್‌ಮೆಂಟ್ ಬಿಲ್ ನಂ 9 ಈ ಬಿಲ್ಲನ್ನು ತಾವು ಪರ್ಯಾಲೋಚನೆಗಾಗಿ ಇಲ್ಲಿ ತೆಗೆದುಕೊಂಡಿದ್ದೀರಿ. ಇದರ ಮೂಲ ಉದ್ದೇಶ

ಏನೆಂದರೆ, Karnataka Stamp Act ನಾವು ಅಮೆಂಡ್‌ಮೆಂಟ್ ತೆಗೆದುಕೊಂಡು ಬರುತ್ತಿದ್ದೇವೆ. ನಮ್ಮ ಈ ಸರ್ಕಾರ ಬಂದ ಮೇಲೆ ಹೊಸದಾದ Industrial Policy ಯನ್ನು 2006 ರಿಂದ 2011 ರವರೆಗೆ ನಾವು ಏನು ಅಮೆಂಡ್‌ಮೆಂಟ್ ಮಾಡಿದ್ದೇವೆ, ಅದರ ಪ್ರಕಾರ ಇವತ್ತು ಕೆಲವೊಂದು Industry ಗಳಿಗೆ ಯಾವು ಹೊಸದಾಗಿ Industry ಯನ್ನು ಪ್ರಾರಂಭ ಮಾಡುತ್ತಾರೆ ಅವರಿಗೆ ಈ Stamp duty ಯಿಂದ ವಿನಾಯಿತಿ ಕೊಡುವಂಥದ್ದರ ಸಲುವಾಗಿ ಈ ಕಾನೂನು ಮಾಡಬೇಕೆಂಬ ಉದ್ದೇಶದಿಂದ ಅದರಲ್ಲಿ ಹೊಸ ಕೈಗಾರಿಕಾ ನೀತಿ 2006 ರಿಂದ 2011 ನೇ ಈ ಕೃಷಿ ನೀತಿಯ ಪ್ರಕಾರ ಇವತ್ತು ಹೊಸದಾಗಿ ಭೂ ಸ್ವಾಧೀನ ಮಾಡಿಕೊಳ್ಳುವಂತಹ ಜಮೀನನ್ನು ನೋಂದಾಯಿಸಿಕೊಳ್ಳಲು ತಗಲುವ ಮುದ್ರಾಂಕ ಮತ್ತು ನೋಂದಣಿ ಶುಲ್ಕದಲ್ಲಿ ಶೇಕಡ 50 ರಿಂದ ಶೇಕಡ 100 ರಷ್ಟು ರಿಯಾಯಿತಿಯನ್ನು ಕೆಲವೊಂದು ಪ್ರದೇಶಗಳಿಗೆ ನಾವು ಅಳವಡಿಕೆ ಮಾಡಿದ್ದೇವೆ. ಇವೊತ್ತು ಹೊಸದಾಗಿ ಭೂ ಸ್ವಾಧೀನ ಮಾಡಿಕೊಳ್ಳುವ ಜಮೀನನ್ನು ನೋಂದಾಯಿಸಿಕೊಳ್ಳಲು ತಗಲುವ ಮುದ್ರಾಂಕ ಹಾಗೂ ನೋಂದಣಿ ಶುಲ್ಕದಲ್ಲಿ ಶೇ. 50 ರಿಂದ 100 ರಷ್ಟು ರಿಯಾಯಿತಿಯನ್ನು ಕೆಲವೊಂದು ಪ್ರದೇಶಗಳಿಗೆ ನಾವು ಅಳವಡಿಕೆಯನ್ನು ಮಾಡಿದ್ದೇವೆ. ಇಡೀ ರಾಜ್ಯದಲ್ಲಿ ವಲಯ ನಂಬರ್ 1, ವಲಯ ನಂಬರ್ 2 ಹಾಗೂ ವಲಯ ನಂಬರ್ 3 ಎಂದು ಮಾಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ತಾವು ಹೇಳುತ್ತಿರುವುದು ಎಲ್ಲಿದೆ? ನಮಗೆ ಅದರ ಪ್ರತಿಯೇ ಬಂದಿಲ್ಲವಲ್ಲ.

ಶ್ರೀ ಜಗದೀಶ್ ಶೆಟ್ಟರ್ :– Bill No. 9 ರಲ್ಲಿ ಇದೆ ನೋಡಿ. ಅದರಲ್ಲೇನಿದೆಯೆಂದರೆ, "In order to encourage entrepreneurs for establishment of new industries, so as to achieve industrials as well as economic growth in the state and in the light of New Industrial Policy 2006-2011, it is proposed to amend the Karnataka Stamp Act, 1957 making provision to give stamp duty exemption as per the Industrials Policy issued by the Commerce & Industries Department." ಇವತ್ತೇನು ಕೈಗಾರಿಕೆ ಇಲಾಖೆಯವರು ಏನು ಅನೌನ್ಸ್ ಮಾಡಿದ್ದಾರೆ ಅದರಲ್ಲಿ ನಾವು ವಲಯ ನಂಬರ್ 1, ವಲಯ ನಂಬರ್ 2, ವಲಯ ನಂಬರ್ 3 ಎಂದು ಇದೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :– ಎಲ್ಲಿದೆ ಜಗದೀಶ್ ಶೆಟ್ಟರೆ?

ಶ್ರೀ ಜಗದೀಶ್ ಶೆಟ್ಟರ್ :– Statement of objects and reasons ಎನ್ನುವ ಕಡೆ ಇದೆ ನೋಡಿ. ಏನಿದೆಯೆಂದರೆ, "Provided further that the state Governement may in public interest reduce or remit by notification till 31st March 2011, the stamp duty payable on any instrument, to be specified therein executed by, specified new tiny, small scale, medium scale or large scale Industrial Units or Mega projects as defined in the New Industrial policy specified in Government Order CI 319 SPI 2005, dated 26-08-2006 or by such key projects of core area as defined in the said policy or specified by the state Government from time to time."

ಶ್ರೀ ಜೆ.ಸಿ. ಮಾಧುಸ್ವಾಮಿ :– ಕನ್ನಡದಲ್ಲಿ ಇಲ್ಲವೆ?

ಶ್ರೀ ಜಗದೀಶ್ ಶೆಟ್ಟರ್ :– ಆಯಿತು. ಕನ್ನಡದಲ್ಲಿರುವುದನ್ನೇ ಓದುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಬಿಲ್ ನಂಬರ್ 9 ನಮಗೆ ಕೊಟ್ಟಿರುವುದರಲ್ಲಿ.....

ಉಪಾಧ್ಯಕ್ಷರು :– ಜಗದೀಶ್ ಶೆಟ್ಟರ್‌ರವರೆ, ಒಂದು ಕ್ಲಾರಿಫಿಕೇಶನ್ ಈಗ ಆಗಬೇಕು. ವಿಧೇಯಕ ಸಂಖ್ಯೆ 8 ಎಂದು ಹೇಳುತ್ತಿದ್ದೀರೋ ಅಥವಾ 9 ಎಂದು ಹೇಳುತ್ತಿದ್ದೀರೋ?

ಶ್ರೀ ಜಗದೀಶ್ ಶೆಟ್ಟರ್ :– ವಿಧೇಯಕ ಸಂಖ್ಯೆ 9.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :– ವಿಧೇಯಕ ಸಂಖ್ಯೆ 9 ರ ಕನ್ನಡದ ಪ್ರತಿ ನನ್ನ ಹತ್ತಿರ ಇದೆ. ಆದರೆ ನೀವು ಹೇಳುತ್ತಿರತಕ್ಕಂಥದ್ದು ಇದರಲ್ಲಿ ಏನೂ ಇಲ್ಲ. ಕನ್ನಡ ಮತ್ತು ಇಂಗ್ಲೀಷ್ ಎರಡೂ ಇದೆ. ಆದರೆ ಡೀಟೈಲ್ಸ್ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ :– ಡೀಟೈಲ್ಸ್ ಎಂದರೆ, ಈ ಇಂಡಸ್ಟ್ರಿಯಲ್ ಪಾಲಿಸಿ ಪ್ರಕಾರ ಕೈಗಾರಿಕಾ ಇಲಾಖೆಯವರು ನಮಗೆ ರಿಕ್ವೆಸ್ಟ್ ಮಾಡಿದ್ದಾರೆ. ಹೊಸದಾಗಿ ಕೈಗಾರಿಕಾ ನೀತಿಯನ್ನು ಏನು ಘೋಷಣೆ ಮಾಡಲಾಗಿದೆ, ಅದರ ಪ್ರಕಾರ ಕೆಲವು

ಹಿಂದುಳಿದ ತಾಲ್ಲೂಕುಗಳಿವೆ ಮತ್ತು ಅತ್ಯಂತ ಹಿಂದುಳಿದ ತಾಲ್ಲೂಕುಗಳಿವೆ ಅದನ್ನು ಮೂರು ಭಾಗವಾಗಿ ಮಾಡಿದ್ದಾರೆ. ಅಂದರೆ ವಲಯ ನಂಬರ್ 1, ವಲಯ ನಂಬರ್2 ಮತ್ತು ವಲಯ ನಂಬರ್ 3 ಎಂದು ಮಾಡಲಾಗಿದೆ. ಇದರಲ್ಲಿ ವಿಷಯವೇನೆಂದರೆ 2006–2011 ಕ್ಕೆ ಇವತ್ತೇನು ರಾಜ್ಯ ಸರ್ಕಾರ ಹೊಸದಾಗಿ ಕೈಗಾರಿಕಾ ನೀತಿಯನ್ನು ಘೋಷಣೆ ಮಾಡಿದೆ ಅದರಲ್ಲಿ ವಲಯ 1, ವಲಯ2, ವಲಯ 3 ಎಂದು ಹಿಂದುಳಿದ ತಾಲ್ಲೂಕುಗಳ ಬಗ್ಗೆಯೂ ಅದರಲ್ಲಿ ಏನು ಹೇಳಲಾಗಿದೆಯೋ ಆ ಬಗ್ಗೆ ಮಾರ್ಕ ಮಾಡಿದ್ದೇವೆ. ಆ ಹಿಂದುಳಿದ ತಾಲ್ಲೂಕುಗಳಲ್ಲಿ ಅದರಲ್ಲಿಯೂ ವಲಯ ನಂಬರ್ 1 ರಲ್ಲಿ ಸ್ಟ್ಯಾಂಪ್ ಡ್ಯೂಟಿಯಲ್ಲಿ ಶೇಕಡ 100 ರಷ್ಟು ವಿನಾಯಿತಿಯನ್ನು ಕೊಡಲಾಗುವುದು. ಅಂದರೆ ವಲಯ ನಂಬರ್ 1 ರಲ್ಲಿ ಹಿಂದುಳಿದ ತಾಲ್ಲೂಕುಗಳು ಏನು ಬರುತ್ತವೆ ಅಲ್ಲಿ ಪೂರ್ತಿ ಎಕ್ಸ್‌ಂಪಶನ್ ಕೊಡಲಾಗುತ್ತದೆ. ವಲಯ ನಂಬರ್ 2 ರಲ್ಲಿ ಯಾವ ತಾಲ್ಲೂಕುಗಳು ಬರುತ್ತವೆ, ಅಲ್ಲಿಗೆ ಶೇ. 75 ರಷ್ಟು ವಿನಾಯಿತಿಯನ್ನು ಕೊಡಲಾಗುವುದು. ಇನ್ನು ವಲಯ ನಂಬರ್ 3 ರಲ್ಲಿ ಯಾವುದೇ ರೀತಿಯ ವಿನಾಯಿತಿಯನ್ನು ಕೊಡಲಾಗುವುದು. ಇನ್ನು ವಲಯ ನಂಬರ್ 3 ರಲ್ಲಿ ಯಾವುದೇ ರೀತಿಯ ವಿನಾಯಿತಿಯನ್ನು ಕೊಡಲಾಗುವುದಿಲ್ಲ. ಅಂದರೆ ವಲಯ ನಂಬರ್ 3 ಬೆಂಗಳೂರು ಬರುತ್ತದೆ. ಹೊಸದಾಗಿ ಕೈಗಾರಿಕಾ ನೀತಿಯನ್ನು ಏನು ಘೋಷಣೆ ಮಾಡಲಾಗಿದೆಯೋ ಅದರನ್ವಯ ಅವರು ನಮ್ಮ ಕಂದಾಯ ಇಲಾಖೆಯ ರಿಜಿಸ್ಟ್ರೇಶನ್ ಡಿಪಾರ್ಟ್‌ಮೆಂಟ್‌ನವರಿಗೆ ರಿಕ್ವೆಸ್ಟ್ ಮಾಡಿದ್ದಾರೆ. ನಾವು ಕೈಗಾರಿಕಾ ನೀತಿ ಪ್ರಕಾರ ವಿನಾಯಿತಿಯನ್ನು ಕೇಳಿದ್ದೇವೆ. ಅದಕ್ಕಾಗಿ ನಿಮ್ಮ ಕಡೆಯಿಂದ ವಿನಾಯಿತಿಯನ್ನು ಕೊಡಬೇಕೆಂದು ರಿಕ್ವೆಸ್ಟ್ ಮಾಡಿದ್ದಾರೆ. ಇದಕ್ಕಾಗಿ ಕಾನೂನನ್ನು ತರಬೇಕೆನ್ನುವ ಉದ್ದೇಶದಿಂದ ಈ ಬಿಲ್‌ನ್ನು ಮಂಡನೆ ಮಾಡುತ್ತಿದ್ದೇನೆ. ಕೈಗಾರಿಕಾ ನೀತಿಗನುಗುಣವಾಗಿಯೇ ಇವತ್ತು ಈ ವಿನಾಯಿತಿಯನ್ನು ಕೊಡುತ್ತಿದ್ದೇವೆ. ಆದಕಾರಣ ದಯವಿಟ್ಟು ಈ ವಿಧೇಯಕಕ್ಕೆ ಸದನ ಒಪ್ಪಿಗೆ ಕೊಡಬೇಕೆಂದು ನಾನು ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಜೆ.ವಿ. ಕ್ರೀರಾಮರೆಡ್ಡಿ (ಬಾಗೇಪಲ್ಲಿ) :– ಮಾನ್ಯ ಉಪಾಧ್ಯಕ್ಷರೆ, ಈ ಸ್ಟ್ಯಾಂಪ್ ಡ್ಯೂಟಿ ಎಕ್ಸಂಪ್‌ಶನ್‌ನ್ನು ಕೊಡಬೇಕೆಂದು ಇವರು ಏನು ಹೇಳುತ್ತಿದ್ದಾರೆ, ಯಾರಿಗೆ? ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ, ಮಧ್ಯಮ ವರ್ಗದ ಕೈಗಾರಿಕೆಗಳು ಸೇರುತ್ತವೆ. ಆದರೆ ಇದರಲ್ಲಿ ಮಲ್ಟಿ ನ್ಯಾಶನಲ್ ಕಂಪನಿಗಳೂ ಸೇರಿಕೊಳ್ಳುತ್ತವೆ.

ನಾಳೆ ದಿವಸ ಬೆಂಗಳೂರಿನಲ್ಲಿಯೋ ಅಥವಾ ಬೇರೆ ಯಾವುದೇ ಜಾಗದಲ್ಲೋ ನಾವು ಫ್ಯಾಕ್ಟರಿ ಓಪನ್ ಮಾಡುತ್ತೇವೆಂದು ಹೇಳಿ ಜಮೀನನ್ನು ನಮಗೆ ಕೊಡಿ, ನಾವು ರಿಜಿಸ್ಟ್ರೇಶನ್ ಮಾಡಿಕೊಳ್ಳುತ್ತೇವೆ, ಆದರೆ ಸ್ಟ್ಯಾಂಪ್ ಡ್ಯೂಟಿಯನ್ನು ಎಕ್ಸ್‌ಂಪ್ಟ್ ಮಾಡಿ ಎಂದು ಕೇಳುತ್ತಾರೆ. ಅದೇ ತಾನೆ ನಿಮ್ಮ ಉದ್ದೇಶ? ಅಲ್ಲಿ ನಮ್ಮ ವಿರೋಧವಿದೆ. ಅವರೇನು ಬಡವರಲ್ಲ. ಜಮೀನನ್ನು ಕೊಂಡುಕೊಂಡು ದೊಡ್ಡ ದೊಡ್ಡ ಫ್ಯಾಕ್ಟರಿಗಳನ್ನು ತೆಗೆಯತಕ್ಕಂಥವರು ಬಡವರೇನಲ್ಲ. ಅವರಿಗೆ ಈ ಟ್ಯಾಕ್ಸ್ ಎಕ್ಸಂಪ್‌ಶನ್ ಕೊಡಬೇಕಾಗಿಲ್ಲ. ಅದರ ಬದಲಿಗೆ ಭೂಮಿಯನ್ನು ಕಳೆದುಕೊಳ್ಳುವ ರೈತನಿಗೆ ಹೆಚ್ಚು ದುಡ್ಡು ಬರುವುದಕ್ಕೆ ನೀವೇನಾದರೂ ಮಾಡಿದ್ದರೆ ನಾವು ಒಪ್ಪುತ್ತಿದ್ದೆವು. ಯಾರಿಗೋ ವಿದೇಶಿ ಕಂಪನಿಯವರಿಗೆ ಅಥವಾ ಯಾರೋ ದೊಡ್ಡ ದೊಡ್ಡ ಶ್ರೀಮಂತ ಕಂಪನಿಯವರಿಗೆ ಏಕೆ ಸ್ಟ್ಯಾಂಪ್ ಡ್ಯೂಟಿಯನ್ನು ಎಕ್ಸಂಪ್ಟ್ ಮಾಡಬೇಕು? ಏಕೆ ಸರ್ಕಾರ ಲಾಸ್ ಮಾಡಿಕೊಳ್ಳಬೇಕು? ಸರ್ಕಾರಕ್ಕೆ ಹಣ ಬರಲಿ. ಅವರೇನು ಬಡವರೆ? ದುಡ್ಡು ಇಲ್ಲದೇ ಇರುವವರೆ? ನೀವು ಏಕೆ ಅವರಿಗೆ ಎಕ್ಸಂಪಶನ್ ಕೊಡಬೇಕು? ಉತ್ತೇಜನ ಕೊಡಬೇಕೆಂದರೆ ನೀವು ಸ್ಟ್ಯಾಂಪ್ ಡ್ಯೂಟಿಯಿಂದ ಅವರಿಗೆ ಎಕ್ಸಂಪ್‌ಶನ್ ಕೊಡುವುದಲ್ಲ. ನೀವು ಅವರಿಗೆ ಬೇಕಾಗಿರುವ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಬೇಕೇ ಹೊರತು ಅವರಿಗೆ ನೀವೇಕೆ ಸ್ಟ್ಯಾಂಪ್ ಡ್ಯೂಟಿ ಎಕ್ಸಂಪ್‌ಶನ್ ಕೊಡಬೇಕು? ಸರ್ಕಾರಕ್ಕೆ ಆದಾಯ ಬರತಕ್ಕಂಥದ್ದನ್ನು ನೀವು ಯಾರೋ ದೊಡ್ಡ ಇಂಡಸ್ಟ್ರಿಯಲಿಸ್ಟ್‌ಗೆ ಏಕೆ ಬಿಟ್ಟುಕೊಡಬೇಕು? ಇದನ್ನು ಬಿಟ್ಟುಕೊಡುವುದಕ್ಕೆ ಆಗುವುದಿಲ್ಲ. ಅವರಿಗೆ ಎಕ್ಸಂಪಶನ್ ಕೊಡತಕ್ಕಂಥ ಅವಶ್ಯಕತೆ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಇಲ್ಲಿ ಜಗದೀಶ್‌ಶೆಟ್ಟರ್‌ರವರೆ, ನಿರ್ದೇಶಪಡಿಸಲಾದಂತೆ ಕಾರ್ಯರೂಪಕ್ಕೆ ಬರುವ ಯಾವುದೇ ಲಿಖಿತ ಪತ್ರದ ಮೇಲೆ ಎಂದು ಹೇಳಿದ್ದೀರಿ. ಅಗ್ರಿಮೆಂಟ್ಸ್, ಜನರಲ್ ಪವರ್ ಆಫ್ ಅಟಾರ್ನಿ, ಹೀಗೆ ಇದರಲ್ಲಿ ಎಲ್ಲವೂ ಸೇರುತ್ತದೆಯೇ? Whatever dealing he does, ಅವೆಲ್ಲಕ್ಕೂ ಸ್ಟ್ಯಾಂಪ್ ಡ್ಯೂಟಿಯಲ್ಲಿ ಎಕ್ಸಂಪ್‌ಶನ್ ಕೊಡುತ್ತಿದ್ದೀರ ಎಂಬ ಬಗ್ಗೆ ನಮಗೆ ಈಗ ಅರ್ಥವಾಗಬೇಕು. ಕಾರ್ಯರೂಪಕ್ಕೆ ತರುವ ಯಾವುದೇ ಲಿಖಿತ ಪತ್ರದ ಮೇಲೆ ಸಂದಾಯ ಮಾಡತಕ್ಕ ಸ್ಟ್ಯಾಂಪ್ ಶುಲ್ಕವನ್ನು ಅಧಿಸೂಚನೆ ಮೂಲಕ ಮಾರ್ಚ್ ಒಳಗೆ ಕಡಿತಗೊಳಿಸಬಹುದು ಅಥವಾ ಮಾಫಿ ಮಾಡಬಹುದು ಎಂದು ಇದೆ. ಇದು ಯಾವುದಕ್ಕೆ ಎಕ್ಸಂಪ್‌ಶನ್? ರಿಜಿಸ್ಟ್ರೇಶನ್ ಆಫ್ ಲ್ಯಾಂಡ್‌ಗೆ ಎಕ್ಸಂಪ್‌ಶನ್ ಕೊಡುತ್ತಿದ್ದೀರ? ನೀವೇನು ಎಂ.ಒ.ಯು. ನಿಂದಲೇ ಅವನಿಗೆ ಸ್ಟ್ಯಾಂಪ್ ಎಕ್ಸಂಪಶನ್

ಕೊಡುವುದಕ್ಕೆ ಸ್ಟಾರ್ಟ್ ಮಾಡಿಕೊಳ್ಳುತ್ತೀರಾ ಎಂಬ ಬಗ್ಗೆ ನಮಗೆ ಈಗ ಅರ್ಥವಾಗಬೇಕಲ್ಲ. ಇದರ ಬಗ್ಗೆ ಸ್ವಲ್ಪ ಸ್ಪಷ್ಟವಾಗಿ ತಾವು ಹೇಳಬೇಕು. ಈಗ ಇಂಡಸ್ಟ್ರಿ ಸೆಟಪ್ ಆಗಬೇಕು. ವಲಯ 1 ಮತ್ತು 2 ರಲ್ಲಿ ಇಂಡಸ್ಟ್ರಿಗಳು ಬರಬೇಕು. ಬೇರೆ ರಾಜ್ಯಗಳ ಜೊತೆ ನಾವು ಸ್ಪರ್ಧೆಯನ್ನು ಮಾಡಬೇಕು. ಅವರೆಲ್ಲರೂ ಕನ್ಸೆಶನ್ ತೋರಿಸಬೇಕಾದರೆ ಕರ್ನಾಟಕ ತೋರಿಸುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಇವೆಲ್ಲವೂ ನಮಗೆ ಅರ್ಥವಾಗುತ್ತದೆ. but your Bill is not clear. On which item you are going to give concession of stamp duty?

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) :– ಮಾನ್ಯ ಉಪಾಧ್ಯಕ್ಷರೆ, ಈ ಬಿಲ್‌ನ್ನು ನಮ್ಮಮ ಸರ್ಕಾರವಿದ್ದಾಗಲೇ ತರಬೇಕೆಂದು ಪ್ರಯತ್ನಪಟ್ಟೆವು. ಆಗಿನ ಸಂದರ್ಭದಲ್ಲಿ ಆರ್ಥಿಕ ಇಲಾಖೆಯವರು ಒಪ್ಪಿರಲಿಲ್ಲ. ಆದರೆ ತಾವು ಒಂದು ಇಂಡಸ್ಟ್ರಿಯಲ್ ಪ್ರೊ ಪಾಲಿಸಿ ನಮ್ಮದು ಇದೆ ಎಂದು ಹೇಳಿ ಇಂಡಸ್ಟ್ರಿಗಳಿಗೆ ಸ್ವಲ್ಪ ಉತ್ತೇಜನ ಕೊಡಬೇಕೆಂದು ಈ ಬಿಲ್‌ನ್ನು ತಂದಿದ್ದೀರಿ. ಆದರೆ ಒಂದು ಏರಿಯಾ ಬಗ್ಗೆ ತಾವು ಸ್ಪೆಸಿಫಿಕ್ ಆಗಿ ಪ್ರಸ್ತಾಪ ಮಾಡಬೇಕಾಗುತ್ತದೆ. ಇಷ್ಟರವರೆವಿಗೆ ಎಂದು ಹೇಳಿ ಲಿಮಿಟೇಶನ್ ಮಾಡಬೇಕಾಗುತ್ತದೆ. ಏಕೆಂದರೆ ಎಸ್.ಇ. ಝೆಡ್. ಎಂದು ಪ್ರಾರಂಭವಾಗುತ್ತದೆ. 500 ಎಕರೆ, 1000 ಎಕರೆ, 2000 ಎಕರೆ ಭೂಮಿಗೆ ನೀವು ಸ್ಟ್ಯಾಂಪ್ ಡ್ಯೂಟಿಯಲ್ಲಿ ಅವರಿಗೆ ಎಕ್ಸ್‌ಂಪಶನ್ ಕೊಟ್ಟರೆ ಬಹುಶಃ ಅದರಿಂದ ಸರ್ಕಾರಕ್ಕೂ ಕೂಡ ತೊಂದರೆಯಾಗುತ್ತದೆ. ಏನೋ ಒಂದು ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗೋ, ಮೀಡಿಯಂ ಸ್ಕೇಲ್ ಇಂಡಸ್ಟ್ರಿಗೋ ಕನಿಷ್ಟ 25 ಎಕರೆವರೆವಿಗೂ ಕೊಟ್ಟರೆ ಪರವಾಗಿಲ್ಲ. ಅದನ್ನು ಬಿಟ್ಟು ನೀವು ಸಾವಿರಾರು ಎಕರೆಗೆ ಎಕ್ಸ್‌ಂಪಶನ್ ಕೊಡುವುದಕೆ ಹೋದರೆ ಸರ್ಕಾರಕ್ಕೆ ಬಹಳ ಲಾಸ್ ಆಗುತ್ತದೆ. ಇದರ ಬಗ್ಗೆ ತಾವು ಚಿಂತನೆಯನ್ನು ಮಾಡಿ. ಅಂದರೆ ಇದರಲ್ಲಿ ತಾವು ಒಂದು ಲಿಮಿಟೇಶನ್ ಫಿಕ್ಸ್ ಮಾಡಬೇಕು. ಇನ್ನು ಎರಡನೆಯದಾಗಿ ಸರ್ಕಾರದಿಂದ ಅನೇಕ ಪ್ರಾಪರ್ಟಿಗಳನ್ನು ಲೀಸ್ ತೆಗೆದುಕೊಳ್ಳುತ್ತಾರೆ. ಕಾರ್ಪೋರೇಶನ್‌ನಿಂದ ಇರಬಹುದು, ರೆವಿನ್ಯೂದಿಂದ ಇರಬಹುದು, ಮತ್ತೊಂದರಿಂದ ಇರಬಹುದು. ಈಗ ನಾವು ಅರ್ಬನ್ ಡೆವಲಪ್‌ಮೆಂಟ್‌ನಲ್ಲಿ 30 ವರ್ಷ ಎಂದು ನಿಗದಿ ಮಾಡಿದ್ದೇವೆ. ಸರ್ಕಾರ ಯಾವುದಾದರೂ ಪ್ರೈವೇಟ್ ಪಾರ್ಟಿಗೆ ಲೀಸ್ ಕೊಟ್ಟಂತಹ ಸಂದರ್ಭದಲ್ಲಿ ಅವರಿಗೆ ನೀವು ನಾಮಿನಲ್ ಫೀಸ್‌ನ್ನು ಇಡಬೇಕು. ಈಗ ಶಿಕ್ಷಣ ಸಂಸ್ಥೆಗಾಗಿ ಬಿ.ಡಿ.ಎ

ದವರು ಕೊಡುತ್ತಾರೆ. ಅವರಿಗೆ ನೀವು 30 ವರ್ಷ ಎಂದು ಹೇಳಿ ಅದಕ್ಕೆ ಸ್ಟ್ಯಾಂಪ್ ಫೀಸ್ 30 ವರ್ಷಕ್ಕೆ ಎಷ್ಟು ಬರುತ್ತದೆ ಎಂದು ಲೆಕ್ಕ ಹಾಕಿ ಮತ್ತು ಬಾಡಿಗೆಯನ್ನು ಲೆಕ್ಕ ಹಾಕಿ ಸ್ಟ್ಯಾಂಪ್ ಫೀಸ್‌ನ್ನು ಕಟ್ಟತಕ್ಕಂಥ ಒಂದು ವ್ಯವಸ್ಥೆ ಬಗ್ಗೆ ಚಿಂತನೆ ಮಾಡಿ. ಏಕೆಂದರೆ 30 ವರ್ಷವಾದ ಮೇಲೆ ನಿಮಗೆ ಪ್ರಾಪರ್ಟಿ ವಾಪಸ್ಸು ಸರ್ಕಾರಕ್ಕೆ ಬರುವುದು. ಈ ರೀತಿ ಇರತಕ್ಕಂಥ ಸಂದರ್ಭದಲ್ಲಿ ಕನಿಷ್ಟ 50 ಸಾವಿರವನ್ನೋ ಅಥವಾ 1 ಲಕ್ಷವನ್ನೋ ಸ್ಟ್ಯಾಂಪ್‌ಡ್ಯೂಟಿ ಫಿಕ್ಸ್ ಮಾಡಿ ಆ ಬಗ್ಗೆ ಒಂದು ಸೀಲಿಂಗ್ ಮಾಡಬೇಕು ಎನ್ನುವುದು ನನ್ನ ಎರಡನೆಯ ಸಲಹೆ. ಈ ವಿಧೇಯಕದಲ್ಲಿಯೇ ಇದನ್ನು ಇನ್‌ಕಾರ್ಪೊರೇಟ್ ಮಾಡುವುದಕ್ಕಾಗುತ್ತದೆಯೇ ಎಂಬ ಬಗ್ಗೆ ನೋಡಬೇಕು. ಏಕೆಂದರೆ ಇದು ಸರ್ಕಾರದ ಪ್ರಾಪರ್ಟಿ. ಸರ್ಕಾರದ ಪ್ರಾಪರ್ಟಿಯನ್ನು ಶಿಕ್ಷಣ ಸಂಸ್ಥೆಗಳಾಗಲಿ, ಇಂಡಸ್ಟ್ರಿಗಳಿಗಾಗಲಿ, ಬಿಸಿನೆಸ್‌ಗಳಿಗಾಗಲಿ ಅಥವಾ ದೇವಸ್ಥಾನವನ್ನು ಮಾಡುವಂಥ ಸಂದರ್ಭದಲ್ಲಿ ನೀವು ಅವರಿಗೆ ಒಂದು ಸ್ಟ್ಯಾಂಪ್ ಡ್ಯೂಟಿಯನ್ನು ಎಕ್ಸ್‌ಂಪ್ಟ್ ಮಾಡುವಂಥದ್ದರ ಬಗ್ಗೆ ನಾಮಿನಲ್ ಫೀಸ್ ಫಿಕ್ಸ್ ಮಾಡಬೇಕೆಂದು ನನ್ನ ಸಲಹೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಮಾನ್ಯ ಉಪಾಧ್ಯಕ್ಷರೆ, ಹೊಸ ಕೈಗಾರಿಕಾ ನೀತಿಯಲ್ಲಿ ವಲಯ ಯಾವುದ್ಯಾವುದು, ಬೆಂಗಳೂರು ಯಾವುದಕ್ಕೆ ಬರುತ್ತದೆ, ಬೇರೆ ಬೇರೆ ಜಿಲ್ಲೆಗಳು ಯಾವುದಕ್ಕೆ ಬರುತ್ತದೆ ಎಂಬ ಬಗ್ಗೆ ಇದರಲ್ಲಿ ಯಾವುದನ್ನೂ ಮೆನ್‌ಶನ್ ಮಾಡಿಯೇ ಇಲ್ಲ. ಅದಕ್ಕೂ ಸಿಕ್ಕಿಬಿಟ್ಟರೆ, ಬೆಂಗಳೂರು ಸುತ್ತಮುತ್ತ ಇರುವ ಭೂಮಿಗೂ ಎಕ್ಸ್‌ಂಪಶನ್ ಸಿಕ್ಕಿಬಿಟ್ಟರೆ ಹೇಗೆ? ಆ ರೀತಿ ಆಗಬಾರದು. ಆದರೆ ಬೀದರ್, ಗುಲ್ಬರ್ಗಾಕ್ಕೆ ಹೋಗುವಂತಹ ಇಂಡಸ್ಟ್ರಿನವರು ಇದ್ದರೆ ಅವರಿಗೆ ಬೇಕಾದರೆ ಕೊಡಿ. ಆದರೆ ದೊಡ್ಡ ದೊಡ್ಡ ಉದ್ಯಮಿಗಳಿಗೆ ಅಗತ್ಯವಿಲ್ಲವೆಂದು ಕಾಣುತ್ತದೆ. Tiny Industries ಮತ್ತು ಸ್ಮಾಲ್ ಸ್ಕೇಲ್ ಇಂಡಸ್ಟ್ರಿಸ್‌ಗೆ ಕೊಡಿ. ದೊಡ್ಡ ದೊಡ್ಡ ಕಂಪನಿಗಳಿಗೆ ಇಷ್ಟು ದೊಡ್ಡ ಪ್ರಕಾಣದಲ್ಲಿ ಎಕ್ಸ್‌ಂಪಶನ್ ಕೊಡುವಂತಹ ಅಗತ್ಯವಿಲ್ಲ. ಅಲ್ಲಿಗೆ ಹೋದಾಗ local ನಲ್ಲಿ ಬೇರೆ ಏನೇನು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಅಲ್ಲಿಯ situation ನೋಡಿ ಕೊಡಬಹುದು. ಇದು blank sheet, ಎಲ್ಲಾ ಇಂಡಸ್ಟ್ರಿಗೆ ಒಂದೇ ರೀತಿ ಕೊಡುವುದು ಸರಿಯಾಗುವುದಿಲ್ಲ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಹೇಳಿದ ಹಾಗೆ Industrial policy ಯಲ್ಲಿ categorize ಮಾಡಿದ್ದಾರೆ. ನಂಜುಂಡಪ್ಪ ವರದಿ ಪ್ರಕಾರ ಅತೀ ಹಿಂದುಳಿದಿರತಕ್ಕಂಥ

ತಾಲ್ಲೂಕುಗಳನ್ನು category -1 ನಲ್ಲಿ include ಮಾಡಿದ್ದಾರೆ. ನಾನು ಆ Industrial policy ಯನ್ನು ಓದಿದ್ದೇನೆ. ಅದರಲ್ಲಿ ಎಕ್ಸ್‌ಂಪಶನ್ ಅನ್ನು ಕೊಟ್ಟಿದ್ದಾರೆ. ಆ ಎಕ್ಸ್‌ಂಪಶನ್‌ಅನ್ನು ನಾವು ಸ್ವಾಗತ ಮಾಡುತ್ತೇವೆ. ಏಕೆಂದರೆ ಗುಲ್ಬರ್ಗಾ, ಬೀದರ್ ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಇಂತಹ district ಗಳಲ್ಲಿ ಇಂಡಸ್ಟ್ರಿಸ್ ಬರಬೇಕಾದರೆ ನಾವು ಸಾಕಷ್ಟು ಸಹಾಯ ಕೂಡ ಮಾಡಬೇಕಾಗುತ್ತದೆ ಮತ್ತು ಕೆಲವೊಂದು ಎಕ್ಸ್‌ಂಪಶನ್ ಅನ್ನು ಕೊಡಬೇಕಾಗುತ್ತದೆ. ನೀವು ಕೊಟ್ಟಿದ್ದನ್ನು ನಾವು ಸ್ವಾಗತ ಮಾಡುತ್ತೇವೆ. ಅದರಲ್ಲೂ ವಿಶೇಷವಾಗಿ ನಂಜುಂಡಪ್ಪ ವರದಿಯಲ್ಲಿ most backward ಇರತಕ್ಕಂಥ ತಾಲ್ಲೂಕಿಗೆ ನೀವು ಎಕ್ಸ್‌ಂಪಶನ್ ಕೊಡಬೇಕು. ನಾವು ಇದನ್ನು ಸ್ವಾಗತ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :– ಮಾನ್ಯ ಉಪಾಧ್ಯಕ್ಷರೆ, ಈ ಒಂದು ಬಿಲ್‌ನಲ್ಲಿ ಡಾ॥ ಶರಣಪ್ರಕಾಶ್‌ರವರು ಹೇಳಿದ ಹಾಗೆ ಬೆಂಗಳೂರು ಸುತ್ತಮುತ್ತ ಇರುವಂತಹ ಇಂಡಸ್ಟ್ರಿಸ್‌ಗೆ ನೀವು ಕೊಡುತ್ತೀರಿ. ಆದರೆ ನಮ್ಮ backward Taluk ಮುಂಡರಗಿಯಂತಾದ್ದು ಏನಿವೆ, ಇಲ್ಲಿಗೆ ಯಾರೂ ಬರುವುದೇ ಇಲ್ಲ, ಸುಮ್ಮನೆ ಹೆಸರಿಗೆ ಆಗುತ್ತವೆ. ಅಲ್ಲಿಗೆ ಯಾರೂ ಬಂದು ಇಂತಹ ದೊಡ್ಡ ದೊಡ್ಡ industries ಹಾಕುವುದೇ ಇಲ್ಲ, ಸಾಧ್ಯವಾಗುವುದಿಲ್ಲ. ಆ ಕಾರಣದಿಂದ ವಲಯ ಎಂದು ಏನಿದೆ ಅದರ ಬಗ್ಗೆ ತಾವು ಎಲ್ಲೆಲ್ಲಿ, ಏನೇನು ಎಂದು ಸ್ಪಷ್ಟವಾಗಿ ಹೇಳಬೇಕು. ಸುಮ್ಮನೆ ಇಲ್ಲಿ 500 ಎಕರೆಯಿಂದ 1000 ಎಕರೆಯನ್ನು ಎಸ್.ಇ.ಝೆಡ್ ಎಂದು ಅವರು ಹೇಳಿದ ಹಾಗೆ ಮಾಡಿದರೆ ಖಂಡಿತವಾಗಿ ಅದು ಬಹಳ ಅನ್ಯಾಯವಾಗುತ್ತದೆ. ಇದು ಒಂದು. ಮಾನ್ಯ ಸಚಿವರೆ, ನಾವು ಮೊದಲಿನಿಂದಲೂ ಹೇಳಿಕೊಮಡು ಬರುತ್ತಿದ್ದೇವೆ. ಏನಾಗಿದೆಯೆಂದರೆ ಇಂತಾದ್ದಾಕ್ಕೆಲ್ಲ ನೂರಾರು ಕೋಟಿ ರೂಪಾಯಿ ಕೊಡುತ್ತೀರಿ. ನಮ್ಮಲ್ಲಿ Educational Industries ಇವೆ, ಅವುಗಳಿಗೆ ಭೂಮಿಯನ್ನು ದಾನವಾಗಿ ಕೊಡುತ್ತಾರೆ. ದಾನ ಕೊಟ್ಟಂತಹ ಜಮೀನಿಗೆ ಸ್ವಲ್ಪ ಸ್ಟ್ಯಾಮಪ್ ಡ್ಯೂಟಿ ಎಕ್ಸ್‌ಂಪಶನ್ ಕೊಡಿ ಎಂದರೆ ಇವತ್ತಿಗೂ ನಿಮ್ಮ Finance Department ನವರು ಏನೇನೋ ಬರೆಯುತ್ತಾರೆ. ಅದು ಬಹಳ ಎಂದರೆ ವರ್ಷಕ್ಕೆ 8 ರಿಂದ 10 ಲಕ್ಷ ಆಗಬಹುದು. ಈಗ Education institution ಗೆ ದಾನ ಕೊಡುವವರೆ ಕಡಿಮೆ. ಆ ರೀತಿ ದಾನ ಕೊಟ್ಟ ಜಮೀನಿಗೆ ತಾವು ಈಗ ಸ್ಟ್ಯಾಂಪ್ ಡ್ಯೂಟಿ ಎಕ್ಸ್‌ಂಪಶನ್ ಕೊಟ್ಟು ದಾನ ಪತ್ರ ಮಾಡಿಸಬೇಕು. ಆದುದರಿಂದ ದಯವಿಟ್ಟು Education institution ಜಮೀನನ್ನು ದಾನ ಕೊಟ್ಟರೆ ಆ ದಾನಪತ್ರಕ್ಕೆ stamp

duty exemption ಮಾಡಬೇಕೆಂದು ಈ Bill ಹಾಕಬೇಕೆಂದು ಈ ಮೂಲಕ ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಶಾಸಕರು ಇಲ್ಲಿ ಅನೇಕ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡಿದರು. ಡಾ॥ ನಂಜುಂಡಪ್ಪನವರು ಏನು ವರಿಯನ್ನು ಕೊಟ್ಟಿದ್ದಾರೆ, ಆ ಪ್ರಕಾರ ಯಾವ್ಯಾವುದು ಹಿಂದುಳಿದ ತಾಲ್ಲೂಕುಗಳು ಬರುತ್ತವೆ, ಅತ್ಯಂತ ಹಿಂದುಳಿದ ತಾಲ್ಲೂಕುಗಳು ಯಾವ್ಯಾವುದು ಇವೆ, ಮುಂದುವರೆದ ತಾಲ್ಲೂಕುಗಳು ಯಾವ್ಯಾವುದು ಇವೆ ಎಂದು ಇದೆಲ್ಲಾ ಒಂದು list ಮಾಡಿದ್ದಾರೆ. ಅದನ್ನೆಲ್ಲಾ ಪರಿಶೀಲನೆ ಮಾಡಿಕೊಂಡು ಇವತ್ತು ಹೊಸ ಕೈಗಾರಿಕಾ ನೀತಿಯಲ್ಲಿ ವಲಯ 1, ವಲಯ 2, ವಲಯ 3 ಎಂದು ಮಾಡಿ ಅದರಲ್ಲಿ ಯಾವ್ಯಾವ ತಾಲ್ಲೂಕುಗಳು ಬರುತ್ತವೆಂದು mention ಮಾಡಿದ್ದಾರೆ. ಇವತ್ತು ವಲಯ 1 ರಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳು ಬರುತ್ತವೆ. ಅವುಗಳು ಕನಕಪುರ, ಮಾಗಡಿ, ಹೊಸದುರ್ಗ, ಚನ್ನಗಿರಿ, ಹರಪನಹಳ್ಳಿ, ಬಾಗೇಪಲ್ಲಿ, ಕುಣಿಗಲ್ ಮಧುಗಿರಿ, ಗುಬ್ಬಿ, ಸಿರಾ, ಪಾವಗಡ, ಹೆಗ್ಗಡದೇವನ ಕೋಟೆ, ಸಂಡೂರು, ಕೂಡ್ಲಿಗಿ, ಭಾಲ್ಕಿ, ಹುಮ್ನಾಬಾದ್, ಬಸವಕಲ್ಯಾಣ, ಸೇಡಂ, ಸುರಪುರ, ಯಾದಗಿರಿ, ಚಿತಾಪುರ, ಅಫ್ಜಲ್‌ಪುರ, ಷಹಾಪುರ, ಆಳಂದ, ಚಿಂಚೋಳಿ, ಜೇವರ್ಗಿ, ಕುಷ್ಟಗಿ, ಯಲಬುರ್ಗಾ, ಸಿಂಧನೂರು, ಮಾನ್ವಿ, ಲಿಂಗಸಗೂರು, ದೇವದುರ್ಗ, ಬೀಳಗಿ, ಮುದ್ದೇಬಿಹಾಳ್, ಬಸವನ ಬಾಗೇವಾಡಿ, ಇಂಡಿ ಮತ್ತು ಸಿಂಧಗಿ ಇವು ಅತ್ಯಂತ ಹಿಂದುಳಿದ ತಾಲ್ಲೂಕುಗಳು. ಈಗ ಹೆಚ್ಚು ಹಿಂದುಳಿದ ತಾಲ್ಲೂಕುಗಳು ಯಾವುವೆಂದರೆ, ಹಿರಿಯೂರು, ಮೊಳಕಾಲ್ಮೂರು, ಹೊಳಲ್ಕೆರೆ, ಚಳ್ಳಕೆರೆ, ಹೊನ್ನಾಳಿ, ಜಗಳೂರು, ಮುಳಬಾಗಿಲು, ಗುಡಿಬಂಡೆ, ಗೌರಿಬಿದನೂರು, ಸೊರಬ, ತುರುವೇಕೆರೆ, ಕೊರಟಗೆರೆ, ಚಿಕ್ಕನಾಯಕನಹಳ್ಳಿ, ಅರಕಲಗೂಡು, ಕಡೂರು, ಮಳವಳ್ಳಿ, ನಾಗಮಂಗಲ, ಕೆ.ಆರ್. ಪೇಟೆ, ಅಣ್ಣೂರು, ಟಿ.ಎಂ. ಪುರ, ನಂಜನಗೂಡು, ಸಿರಗುಪ್ಪ, ಹೆಚ್.ಡಿ. ಹಳ್ಳಿ, ಹೆಚ್.ಹಡಗಲಿ, ಕೊಪ್ಪಳ, ರಾಯಚೂರು, ಹುನಗುಂದ, ಬಾದಾಮಿ, ಅಥಣಿ, ಗೋಕಾಕ, ಸವದತ್ತಿ, ಕಲಘಟಗಿ, ಮುಂಡರಗಿ, ಸವಣೂರು, ಶಿಗ್ಗಾಂವ್, ಹಿರೇಕೆರೂರು, ಸೂಪ ಮತ್ತು ಭಟ್ಕಳ. ಇವೆಲ್ಲಾ ವಲಯ 1 ರಲ್ಲಿ ಬರುತ್ತವೆ. ಯಾವುದಾದರೂ ಉದ್ದಿಮೆದಾರರು ಹೊಸದಾಗಿ ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತೇವೆಂದು ಈ ಒಂದು ತಾಲ್ಲೂಕುಗಳಲ್ಲಿ ಬರುತ್ತೇವೆಂದರೆ ಅವರಿಗೆ ಸ್ಟ್ಯಾಂಪ್ ಡ್ಯೂಟಿಯಿಂದ ನೂರಕ್ಕೆ ನೂರರಷ್ಟು ವಿನಾಯಿತಿ ಇದೆ. ಏಕೆಮದರೆ ಅವರಿಗೆ ಪ್ರೋತ್ಸಾಹ ಕೊಡಬೇಕೆಂದು ವಿನಾಯಿತಿ ಕೊಡಲಾಗುತ್ತಿದೆ.

ಮಾನ್ಯ ಸದಸ್ಯರುಗಳಾದ ಎಸ್.ಎಸ್. ಪಾಟೀಲ್ ಹಾಗೂ ಡಾ॥ ಶರಣಪ್ರಕಾಶ್‌ರವರು, ಇವತ್ತು ಬೆಂಗಳೂರಿಗೆ ಹೆಚ್ಚು concentration ಕೊಡುತ್ತಿದ್ದು, ಎಲ್ಲರಿಗೂ ಕೂಡ ಬೆಂಗಳೂರಿನ ಸುತ್ತಮುತ್ತ ಇಂಡಸ್ಟ್ರಿ ಮಾಡುವುದಕ್ಕೆ ಭೂಮಿಬೇಕೆಂದು ಕೇಳುತ್ತಿರುವುದರಿಂದ ಅಂತಹವರಿಗೆ encourage ಮಾಡದೇ discourage ಮಾಡಬೇಕೆನ್ನುವ ಉದ್ದೇಶದಿಂದ, ಇವತ್ತು ಅತೀ ಹಿಂದುಳಿದ ತಾಲ್ಲೂಕು ಮತ್ತು ಹೆಚ್ಚು ಹಿಂದುಳಿದ ತಾಲ್ಲೂಕು ಎಂದು ಏನು ಪಟ್ಟಿ ಮಾಡಿದೆ, ಇಂತಹ ಕಡೆಯಲ್ಲಿ ಯಾರೂ ಕೈಗಾರಿಕೆ ಸ್ಥಾಪನೆ ಮಾಡುವುದಕ್ಕೆ ಬರುತ್ತಾರೆ, ಅವರಿಗೆ ನೂರಕ್ಕೆ ನೂರರಷ್ಟು stamp duty exemption ಇದೆ. ಅದರಲ್ಲಿ loan, mortgage, sale deeds ಇರಬಹುದು, ಇವೆಲ್ಲಕ್ಕೂ ಆ Industrialist ಏನು stamp duty ತುಂಬಬೇಕಾಗುತ್ತದೆ. ಅಂತಹವರಿಗೆ ನೂರಕ್ಕೆ ನೂರರಷ್ಟು stamp duty exemption ಇದೆ. ಇನ್ನೊಂದು ವಲಯ 2 ಎಂದು ಮಾಡಿ, ಹಿಂದುಳಿದ ತಾಲ್ಲೂಕುಗಳದ್ದು ಮತ್ತೊಂದು list ಮಾಡಿದ್ದೇವೆ. ಚಿತ್ರದುರ್ಗ, ದಾವಣಗೆರೆ, ಹರಿಹರ, ಕೋಲಾರ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಮಾಲೂರು, ಬಂಗಾರುಪೇಟೆ, ಚಿಂತಾಮಣಿ, ಶ್ರೀನಿವಾಸಪುರ, ಶಿವಮೊಗ್ಗ, ಭದ್ರಾವತಿ, ಸಾಗರ, ಶಿಕಾರಿಪುರ, ಹೊಸನಗರ, ತೀರ್ಥಹಳ್ಳಿ, ತುಮಕೂರು, ತಿಪಟೂರು, ಚಿಕ್ಕಮಗಳೂರು, ಯಳಂದೂರು, ತರೀಕೆರೆ, ಶೃಂಗೇರಿ, ಮೂಡಿಗೆರೆ, ಕೊಪ್ಪ, ನರಸಿಂಹರಾಜ ಪುರ, ಬಂಟ್ವಾಳ, ಪುತ್ತೂರು, ಸುಳ್ಯ, ಬೆಳ್ತಂಗಡಿ, ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ, ಹೊಳೆನರಸೀಪುರ, ಬೇಲೂರು, ಆಲೂರು, ಸಕಲೇಶಪುರ, ಮಡಕೇರಿ, ಸೋಮವಾರ ಪೇಟೆ, ವಿರಾಜಪೇಟೆ, ಮಂಡ್ಯ, ಮದ್ದೂರು, ಶ್ರೀರಂಗಪಟ್ಟಣ, ಪಾಮಡವಪುರ, ಪಿರಿಯಾಪಟ್ಟಣ, ಕೆ.ಆರ್.ನಗರ, ಉಡುಪಿ, ಕುಂದಾಪುರ, ಕಾರ್ಕಳ, ಬಳ್ಳಾರಿ, ಹೊಸಪೇಟೆ, ಬೀದರ್, ಗುಲ್ಬರ್ಗಾ, ಗಂಗಾವತಿ, ಬಾಗಲಕೋಟೆ, ಮುಧೋಳ, ಜಮಖಂಡಿ, ಬೆಳಗಾವಿ, ಖಾನಾಪುರ, ಹುಕ್ಕೇರಿ, ರಾಮದುರ್ಗ, ಬೈಲಹೊಂಗಲ, ನಿಪ್ಪಾಣಿ, ರಾಯಬಾಗ್, ಬಿಜಾಪುರ, ಧಾರವಾಡ–ಹುಬ್ಬಳ್ಳಿ, ಕುಂದಗೋಳ, ನವಲಗುಂದ, ಗದಗ್, ನರಗುಂದ, ರೋಣ ಮತ್ತು ಶಿರಹಟ್ಟಿ ಇಂತಹ ಕಡೆಗಳಲ್ಲಿ.....

ಉಪಾಧ್ಯಕ್ಷರು :– ಮಾನ್ಯ ಸದಸ್ಯರೆಲ್ಲಾ ಇದನ್ನು ಒಪ್ಪಿಕೊಂಡಿದ್ದಾರೆ, ಅವರು ಸಾಕು ಎಂದು ಹೇಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :– ಇಂತಹ ಹಿಂದುಳಿದ ತಾಲ್ಲೂಕುಗಳಲ್ಲಿ ಯಾರು ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಾರೆ, ಅಂತಹವರಿಗೆ 75% stamp

duty exemption ಇದೆ. ಇನ್ನು ವಲಯ 3 ರಲ್ಲಿ ಬೆಂಗಳೂರು ಬರುತ್ತದೆ. ಬೆಂಗಳೂರಿನಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವವರಿಗೆ ಯಾವುದೇ ವಿನಾಯಿತಿ ಇಲ್ಲ. ಬೆಂಗಳೂರು, ಬೆಂಗಳೂರು ಪೂರ್ವ, ದಕ್ಷಿಣ ಇಲ್ಲಿ ಸ್ಥಾಪನೆ ಮಾಡುವವರಿಗೆ ಯಾವುದೇ ವಿನಾಯಿತಿಯನ್ನು ನಾವು ಕೊಟ್ಟಿಲ್ಲ. ಆದುದರಿಂದ ನಾವು ಹಿಂದುಳಿದ ತಾಲ್ಲೂಕಿಗೆ ಬಂದು ಸ್ಥಾಪನೆ ಮಾಡಿ ಎಂದು ಕೇಳುತ್ತಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ :– Education ಸಲುವಾಗಿ ಜಮೀನು ದಾನ ಕೊಟ್ಟವರಿಗೆ stamp duty exemption ಬಗ್ಗೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಎಸ್.ಎಸ್. ಪಾಟೀಲ್‌ರವರು ಹೇಳಿದ ವಿಚಾರದಲ್ಲಿ, ಯಾರು ಶಿಕ್ಷಣ ಸಂಸ್ಥೆಗಳಿಗೆ ಜಮೀನನ್ನು ದಾನ ಕೊಡುವುದಕ್ಕೆ ಮುಂದೆ ಬರುತ್ತಾರೆ, ಅಂತಹವರಿಗೆ stamp duty ಗೆ ಸಂಬಂಧಪಟ್ಟಂತೆ ಏನು file ಬರುತ್ತದೆ, ಅದನ್ನು definitely clearance ಮಾಡಿಕೊಡುತ್ತೇವೆ. ಆ ರೀತಿ ದಾನ ಕೊಡುವವವರಿಗೆ ಪ್ರೋತ್ಸಾಹ ಕೊಡಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ :– ಆ Act ನಲ್ಲಿ ಸೇರಿಸಿಬಿಡಿ, clear ಆಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :– ಇದು industrial policy ಗೆ ಸಂಬಂಧಪಟ್ಟಂತೆ ಇದೆ, ಅದನ್ನು ಇದರಲ್ಲಿ ಸೇರಿಸುವುದಕ್ಕೆ ಬರುವುದಿಲ್ಲ. ಅದನ್ನು separate ಆಗಿ ಮಾಡಬೇಕು.

ಶ್ರೀ ಎಸ್.ಎಸ್. ಪಾಟೀಲ್ :– ಅದರ ಬಗ್ಗೆ separate ಮಾಡುತ್ತೀರಾ?

ಉಪಾಧ್ಯಕ್ಷರು :– ಅದನ್ನು separate ಆಗಿ ಮಾಡುತ್ತಾರೆ.

<u>ಪರ್ಯಾಲೋಚನಾ ಪ್ರಸ್ತಾಪ</u>

ಪ್ರಸ್ತಾವ ಏನೆಂದರೆ, " 2007 ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

<u>ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು</u>

ಖಂಡ 2

ಉಪಾಧ್ಯಕ್ಷರು :- "ಖಂಡ 2 ಈ ವಿಧೇಯಕದ ಅಂಗವಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು :- ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, 2007 ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ (ವಿಧೇಯಕ ಸಂಖ್ಯೆ 9) ಅನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು :- ಪ್ರಸ್ತಾವ ಏನೆಂದರೆ,

"2007 ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಅನುಬಂಧ - 5)

ಉಪಾಧ್ಯಕ್ಷರು :- ಈಗ ಜಗದೀಶ್ ಶೆಟ್ಟರ್‌ರವರೆ ತಮ್ಮದೆ ಇನ್ನೊಂದು ಸ್ಟಾಂಪು ವಿಧೇಯಕ ಇದೆ.

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಉಪಾಧ್ಯಕ್ಷರೆ, ಈಗ ಬಿಲ್ ನಂ 9 ಪಾಸ್ ಆಯಿತು, ವಿಧೇಯಕ ಸಂಖ್ಯೆ 8 ಕ್ಕೆ ಮಾಹಿತಿಯನ್ನು ಕೊಡಬೇಕು. ನಂತರ ಅದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುತ್ತೇನೆ.

ಇ) <u>ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ 2007</u>

ಉಪಾಧ್ಯಕ್ಷರು :– ಈಗ ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ 2007 ರ ಪರ್ಯಾಲೋಚನಾ ಪ್ರಸ್ತಾವ.

(4 : 30)

ಉಪಾಧ್ಯಕ್ಷರು :– ಈಗ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2007 ಮಾನ್ಯ ಸಿ.ಎಂ. ಉದಾಸಿಯವರು.

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2007 ಅನ್ನು ಪರ್ಯಾಲೋಚಿಸಲು ಕೋರುತ್ತೇನೆ.

ಉಪಾಧ್ಯಕ್ಷರು :– ತಾವು ಬಿಲ್ ಬಗ್ಗೆ explain ಮಾಡಿ.

ಶ್ರೀ ಸಿ.ಎಂ. ಉದಾಸಿ :– ಮಾನ್ಯ ಉಪಾಧ್ಯಕ್ಷರೆ, ರಾಜ್ಯದಾದ್ಯಂತ ಆಶ್ರಯ ಮನೆಗಳ ನಿರ್ಮಾಣ ಮಾಡಬೇಕಾದಂಥ ಸಂದರ್ಭದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾದಂತಹ ಅಧಿಕಾರವನ್ನು ಗ್ರಾಮ ಸಭೆಗಳಿಗೆ ಮತ್ತು ವಾರ್ಡ್ ಸಭೆಗಳಿಗೆ ಕೊಟ್ಟಿರುವಾಗ, ಪಂಚಾಯತ್ ಕೊನೆಗೆ ತೀರ್ಮಾನ ಮಾಡಿ, ಅದಕ್ಕೆ ಅಂತಿಮವಾಗಿ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಮನೆಗಳನ್ನು ಕಟ್ಟಿಕೊಡುವಂಥ ಕೆಲಸ ರಾಜ್ಯದಾದ್ಯಂತ ನಾವು ನಿರೀಕ್ಷೆ ಮಾಡಿದಂಥ ಪ್ರಮಾಣದಲ್ಲಿ, ನಿಗದಿತ ಸಮಯದಲ್ಲಿ ಆಗುತ್ತಿಲ್ಲ, ಮತ್ತು ಅನೇಕ ಸಂದರ್ಭದಲ್ಲಿ ನಾವು ದೂರುಗಳನ್ನು ಸಹ ಕೇಳುತ್ತಿರುವುದರಿಂದ, ಈ ದೂರುಗಳನ್ನು ನಿವಾರಣೆ ಮಾಡುವ ಸಲುವಾಗಿ, ನಾವು ಕಾನೂನಿನಲ್ಲಿ ತಿದ್ದುಪಡಿಯನ್ನು ಮಾಡಿ, ಈ ಅಧಿಕಾರಕ್ಕೆ ಒಂದು ಕಮಿಟಿಯನ್ನು ಮಾಡಿ, ಆ ಕಮಿಟಿ ಮುಖೇನಾ ಆಯ್ಕೆ ಮಾಡಬೇಕಾದಂಥ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕೆ ಅಧಿಕಾರವನ್ನು ಕೊಡುವ ಸಲುವಾಗಿ, ಈ ತಿದ್ದುಪಡಿಯನ್ನು ಕರ್ನಾಟಕ ಪಂಚಾಯತ್ ರಾಜ್ 1993 ರಲ್ಲಿ 14 ರಲ್ಲಿ ಇರುವಂಥ 3 ನೇ ಪ್ರಕರಣ 3 ನೇ ಉಪ ಪ್ರಕರಣದಲ್ಲಿ ಬ. ತಂಡಕ್ಕೆ ಹಾಗೂ